Regd No BC 155

— ಶ್ರೀ —

4—5—1962

Sri "SATYAVADI"
— DAILY —
MYSORE 4
46 th Year

ಸತ್ಯವಾದಿ
SATYAVADI

ಗ್ರಾಮಾಂತರ ಪ್ರದೇಶಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

Protect the cow

ಸ್ಥಾಪಕರು— ಅರಮನೆ ಸಂಸ್ಥೇದಾರ್ ಎಂ. ವಿ. ಸುಬ್ಬರಾಯುರು [ಬಿಡಿ ಪ್ರತಿ 3 ಪೈ

ಗೋಸಂರಕ್ಷಣೆ ಮಾಡಿ

ಡಿಎಂಕೆ ಪ್ರತ್ಯೇಕತೆಯ ಪ್ರಯತ್ನ ನಾಶ

ರಾಜ್ಯಸಭೆಯಲ್ಲಿ ನೆಹರು ಹೇಳಿಕೆ

ಪ್ರಧಾನಿ ಪಂ|| ನೆಹರು ನಿನ್ನೆ ರಾಜ್ಯಸಭೆಯಲ್ಲಿ ಹೇಳಿಕೆಯಿತ್ತು, ಪ್ರತ್ಯೇಕ ದ್ರಾವಿಡಸ್ತಾನದ ಬಗ್ಗೆ ದ್ರಾವಿಡ ಮುನ್ನೇತ್ರ ಕಳಗಂ ಬೇಡಿಕೆಯನ್ನು ಖಂಡಿತವಾಗಿ ಕಡೆಯಬೇಕು ಮತ್ತು ಅಂಥಹ ಪ್ರಯತ್ನ ನಡೆದರೆ ಅದನ್ನು ಸರ್ವಬಲದಿಂದಲೂ ಎದುರಿಸಬೇಕು ಎಂದರು.

ಕಾಶ್ಮೀರದ ಬಗ್ಗೆ ಜಫ್ರುಲ್ಲ

ಪಾಕಿಸ್ತಾನದ ಖಾಯಂ ಪ್ರತಿನಿಧಿ ಸರ್ ಮುಹ್ಮದ್ ಜಫ್ರುಲ್ಲ ಖಾನ್ ಮೊನ್ನೆ ಭದ್ರತಾ ಸಮಿತಿಯಲ್ಲಿ ಮಾತನಾಡಿ, ಕಾಶ್ಮೀರ ಬಗ್ಗೆ ವಿಶ್ವಸಂಸ್ಥೆಯೊಡನೆ ಆದ ಒಪ್ಪಂದವನ್ನು ಪಾಕಿಸ್ತಾನ ಎಂಥಾದಿದೆಯೇ ಎಂಬುದನ್ನು ನಿರ್ಧರಿಸಲು ಭಾರತ ಮತ್ತು ಪಾಕಿಸ್ತಾನದ ಪ್ರತಿನಿಧಿಯಾದ ಡಂ|| ಫ್ರಾಂಕ್ ಗ್ರಹಾಂರನ್ನು ನೇಮಿಸುವಂತೆ ಸೂಚಿಸಿದರು. ಪಾಕಿಸ್ತಾನ ಒಪ್ಪಂದ ಏನಾರಿದ್ದರೆ ಸಾಧ್ಯವಾದಷ್ಟು ಬೇಗ ಅದು ಪರಿಸ್ಥಿತಿ ಸರಿಪಡಿಸಿಕೊಳ್ಳುವುದು ಮತ್ತು ಅನಂತರ ಕಾಶ್ಮೀರದಲ್ಲಿ ಮತಸಂಗ್ರಹ ನಡೆಯಬಹುದು ಎಂದರು. ಅವರು ಇದಂ ಬದಲು ಮತ್ತೊಂದು ಸೂಚನೆ ಮಾಡಿ. ವಿಶ್ವಸಂಸ್ಥೆ ಭದ್ರತಾ ಸಮಿತಿ ಅಧ್ಯಕ್ಷರಿಂ ಅಥವಾ ಡಾ|| ಗ್ರಹಾಂ ಬದಲು ಆಫ್ರೋ-ಏಷ್ಯದ ವರೊಬ್ಬರ್ವಂ ಹಾಜರಾತಿಯಲ್ಲಿ ಭಾರತ ಮತ್ತು ಪಾಕಿಸ್ತಾನಗಳಲ್ಲಿ ನೇರ ಮಾತುಕತೆ ನಡೆಯಲಿ ಎಂದರು ನಾನು ಗ್ರಹಾಂರನ್ನು ಒಪ್ಪುತ್ತೇನೆ ಎಂದರು. ವಿಶ್ವಸಂಸ್ಥೆಯ ನಿಯೋಗದ ನಿರ್ಣಯದ ವಿರುದ್ಧ ಕಾಶ್ಮೀರದಲ್ಲಿ ಪಾಕಿಸ್ತಾನ ಸೇನೆಯ ಬಲವನ್ನು ಹೆಚ್ಚಿಸಿರುವುದಾಗಿ ತಿಳಿಸಿದರು

× ಪೋರ್ಚುಗಲ್ ಅದ್ಯಂತ ಈಗ ಶಾಂತಿ ಇದೆ ಎಂದು ಲಿಸ್ಬನ್ ವಾರ್ತೆ

ಹೊಸ ವಿಷಯಗಳಿಲ್ಲ

ಭಾರತ ರಕ್ಷಣಾ ಮಂತ್ರಿ ಶ್ರೀ ವಿ ಕೆ ಕೃಷ್ಣ ಮೆನನ್ ಮೊನ್ನೆ ಭದ್ರತಾ ಸಮಿತಿಯಲ್ಲಿ ಮಾತನಾಡುತ್ತಾ, ಹೊಸದಾಗಿ ಬಂದಿರುವವರಿಗೆ ಸರ್ ಜಫ್ರುಲ್ಲ ಹೊಸ ವಿಷಯವನ್ನು ಹೇಳಿದರೆಂದು ಕಾಣುವುದು ಎಂದರು ಮುಂಚೆಯೇ ಪಾಕಿಸ್ತಾನ ಈ ವಿಚಾರವನ್ನೆಲ್ಲ ತಿಳಿಸಿದೆ, ಭಾರತ ಅವುಗಳಿಗೆಲ್ಲ ಉತ್ತರವಿತ್ತಿದೆ ಎಂದರು.

ಭಾರತಕ್ಕೆ ಬೆಂಬಲ

ಕಾಶ್ಮೀರದ ವಿಚಾರದಲ್ಲಿ ಸಂಯುಕ್ತ ಅರಬ್ ಗಣ ರಾಜ್ಯ ಭಾರತದ ನಿಲುವಿಗೆ ಬೆಂಬಲ ಕೊಡುವುದಾಗಿ ಕೈರೋ ವರದಿ. ಆ ರಾಜ್ಯ ಈಗ ವಿಶ್ವಭದ್ರತಾ ಸಮಿತಿಯಲ್ಲಿ ಸದಸ್ಯ ರಾಷ್ಟ್ರವಾಗಿದೆ

ರಾಣ್ಯಗಳನ್ನು ಬಿಡುವುದಿಲ್ಲ

ಚೀನಾ-ಭಾರತದ ಗಡಿಯಲ್ಲಿ ತನ್ನ ರಾಣ್ಯಗಳನ್ನು ಮುಂದುವರಿಸುವುದು, ಅವುಗಳನ್ನು ಬಿಡುವುದಿಲ್ಲ ಎಂದು ಪಂ|| ನೆಹರು ನಿನ್ನೆ ಲೋಕಸಭೆಯಲ್ಲಿ ತಿಳಿಸಿದರು

ನಾಳೆಯ ಪಂಚಾಂಗ

ಅಸ್ಥಾನ ಮಹಾವಿದ್ವಾನ್ ಧರ್ಮಾಧಿಕಾರಿ
ದೈವಜ್ಞ ಶಿಖಾಮಣಿ
ಸಂಪತ್ಕೃಷ್ಣ ಜೋಯಿಸರಿಂದ

5 ಪೃಥನು ಕೃತ್ತಿಕ

೦೦೦

ಗಗನ ಪ್ರಪಾತಕ್ಕೆ 3 ನೆಯ ಗಗನ ಪ್ರವಾಸಿ ಸಿದ್ಧವಾಗಿರುವುದಾಗಿ ರಷ್ಯದ ತಿತೋವ್ ವಾಷಿಂಗ್ಟನ್ನಲ್ಲಿ ನಿನ್ನೆ ತಿಳಿಸಿದರು.

ಚೀನಾ-ಪಾಕ್ ಒಪ್ಪಂದ

ಕಮ್ಮ ಒಂದೇ ಗಡಿಯನ್ನು ಸ್ಥಾಪಿಸಲು ಪಾಕಿಸ್ತಾನ ಮತ್ತು ಚೀನಾ ಸಂಧಾನ ನಡೆಸುವುದಾಗಿ ಕರಾಚಿ ವಾರ್ತೆ.

ಗ್ರಾಮಗಳಿಗೆ ರವಾನೆ

ಪಾಂಘಾಯಿ ನಗರದ ಜನ ಸಂಖ್ಯೆ 70 ಲಕ್ಷ ಆಹಾರ ಅಭಾವ ಇರುವ ದೆಸೆಯಿಂದ ಉತ್ಪಾದನೆಯನ್ನು ಮಾಡಲಾರದ ಶೇಕಡ 30 ರಷ್ಟು ಜನರನ್ನು ಸ್ವಯಂ ಸೇವಕ ಉದ್ದೇಶದಿಂದ ಗ್ರಾಮಗಳಿಗೆ ಕಳುಹಿಸುತ್ತಿದ್ದಾರೆ.

83 ಜನರ ಮರಣ

ಟೋಕಿಯೋದ ವಿಕರಾಷಿಮ ರೈಲ್ವೆಯ ನಿಲ್ದಾಣದಲ್ಲಿ ನಿನ್ನೆ 3 ರೈಲುಗಳ ಡಿಕ್ಕಿ ಆಗಿ 83 ಜನರು ಮರಣಹೊಂದಿರುವರು

ಸಮ್ಮೇಳನ

ಈ ದಿನ ನವದೆಹಲಿಯಲ್ಲಿ ಅಖಿಲ ಭಾರತ ಪ್ರಜಾಪ್ರಭುತ್ವ ರಕ್ಷಣಾ ಸಮ್ಮೇಳನ ನಡೆಯುವುದು. ಲೋಕಸಭೆ ಹಾಗೂ ರಾಜ್ಯಗಳ ಶಾಸನ ಸಭೆಗಳ ವಿರೋಧ ಪಕ್ಷದ ಸದಸ್ಯರು ಹಾಗೂ ಸ್ವತಂತ್ರರು ಭಾಗವಹಿಸುವರು ಚೀನಾ ವಶಕ್ಕೆಗಳಲ್ಲಿ ಸರ್ಕಾರಿ ಅಧಿಕಾರಿಗಳ ಹಸ್ತಕ್ಷೇಪ ಖಂಡಿಸುವುದು ಹಾಗೂ ಚೀನಾ ವಶಕ್ಕೆಗಳಲ್ಲಿ ನಡೆಯುವ ಅಕ್ರಮಗಳನ್ನು ತಡೆಯಲು ಸಲಹೆ ಕೊಡುವುದು ಈ ಸಮ್ಮೇಳನದ ಉದ್ದೇಶ

ಭಾರಿ ಸ್ವಾಗತ

ನವದೆಹಲಿಯ ರಾಮಲೀಲಾ ಮೈದಾನದಲ್ಲಿ ದೆಹಲಿ ನಾಯಕರು ಈ ವಾರ ಹೆ 10 ರಂದು ಡಾ|| ರಾಜೇಂದ್ರ ಪ್ರಸಾದರಿಗೆ ವೈಭವಪೂರಿತ ಸ್ವಾಗತ ಕೊಡುವರು

ತುಂಬಾ ನಷ್ಟ

ಅಲಿಕಲ್ಲು ಮಳೆಯಿಂದ ಕಡೂರಿನ ನೀಲಘಟ್ಟ ಗ್ರಾಮದಲ್ಲಿ ತುಂಬಾ ನಷ್ಟವಾಗಿದೆ.

ಕಡೆಯ ಗುಲಾಮನ ಮರಣ

ಕೊಲರಾಡೊ ರಾಜ್ಯದ ಬೌಲ್ಡರಿನ ಆಸ್ಪತ್ರೆಯಲ್ಲಿ ಅಮೆರಿಕದ ಕಡೆಯ ಗುಲಾಮ ಜೇಂಸ್ ವಿಕ್ ತನ್ನ 109 ನೆಯ ವಯಸ್ಸಿನಲ್ಲಿ ಆಸ್ಪತ್ರೆಯಲ್ಲಿ ನಿನ್ನೆ ಮರಣ ಹೊಂದಿದನು ಆತ 13 ತಿಂಗಳಿನ ಮಗುವಾಗಿದ್ದಾಗ ಗುಲಾಮನಾಗಿ ಮಾರಲ್ಪಟ್ಟನು. 1873 ರಲ್ಲಿ ಆತ ಗುಲಾಮಗಿರಿಯಿಂದ ವಿಮೋಚನೆ ಪಡೆದನು.

ಶ್ಲೋಚಿಸಿದ್ದಂತೆ ಆಯಿತು

ಕಾಲಿಫೋರ್ನಿಯಾದ ಸ್ಯಾನ್ಫ್ರಾನ್ಸಿಸ್ಕೊ ನಲ್ಲಿ ನಿನ್ನೆ ಸೆಂಟ್ ಪ್ಯಾಟ್ರಿಕ್ ಚರ್ಚಿನ ಪಾದ್ರಿಯೋರ್ವನನ್ನು ತನ್ನನ್ನು ಆಶೀರ್ವದಿಸಬೇಕೆಂದು ಪ್ರಾರ್ಥಿಸಿದಳು ತಾನು ಸಾಯುವ ಭಯವಿದೆ ಎಂದಳು ಆತ ಈ ವಾರ್ತೆ ಪಡೆದು ಚರ್ಚಿನಿಂದ ಹೊರಗೆ ಹೋದನಂತರ ಆಕೆ ಕಾರಿಗೆ ಸಿಕ್ಕಿ ಸತ್ತಳು.

★

ನವದೆಹಲಿಯ ಪಾರ್ಲಿಮೆಂಟ್ ಭವನದ ಸೆಂಟ್ರಲ್ ಹಾಲ್‌ನಲ್ಲಿ ಭಾರತದ ಹೊಸ ಅಧ್ಯಕ್ಷರು ಈ ಮಾಹೆ 13 ನೇ ತಾ|| ಬೆಳಿಗ್ಗೆ 8 ವರೆಗೆ ಭಾರತದ ಪ್ರಧಾನ ನ್ಯಾಯಾಧೀಶರು ಮುಂದೆ ಪ್ರಮಾಣ ವಚನವನ್ನು ಸ್ವೀಕರಿಸುವರು.

★

ಮಲಬಾರಿನಲ್ಲಿ ಸುಮಾರು 50 ಜನರು ಪಾಕಿಸ್ತಾನ ರಾಷ್ಟ್ರೀಯರು ರಹದಾರಿ ಇಲ್ಲದೆ ಇರುವರೆಂದು ಅವರೆಲ್ಲರೂ ನಾಳೆ ಪಕ್ಕೆ ಆಗಮಿಸುವರೆಂದು ತಿರುವೇಂದ್ರಂ ವರದಿ ತಿಳಿಸುತ್ತದೆ.

★

ಪೂರ್ವ ಪಾಕಿಸ್ತಾನದ ರಾಜಧಾನಿ ಢಾಕಾಕ್ಕಾಗಲ್ಲಿ ಕೋಮುವಾರು ಗಲಭೆಗಳಿದ ಬಗ್ಗೆ ವಿಶ್ವಸಂಸ್ಥೆಯ ಭಾರತದ ಖಾಯಂ ನಿಯೋಗ ಪ್ರಕಟಣೆ ಹೊರಡಿಸಿದೆ ಎಂದು ನ್ಯೂಯಾರ್ಕಿನ ವಾರ್ತೆ.

★

ರಷ್ಯದ 2 ಪೆಲಿಕಾಪ್ಟರುಗಳನ್ನು ಹೈಜಾಕ್ ಮಾಡಿಕೊಂಡಿದೆ.

ಪೌರಸಭೆ

ಮೈಸೂರು— ಪೌರಸಭೆಯ ಮುಂದುವರಿದ ಮಾಸಿಂಗು ನಾಳೆ ಸಂ ಜೆ 4 ಗಂಟೆಗೆ ನಡೆಯುವುದು.

ಸಮ್ಮೇಳನ

ಬೆಂಗಳೂರು— ಅಖಿಲ ಕರ್ನಾಟಕ ಕನ್ನಡ ಕಲಾವಿಲಾಸಿ ಸಂಸ್ಥೆಗಳ ಕೇಂದ್ರ ಸಂಘದ ಆಶ್ರಯದಲ್ಲಿ ಅಖಂಡ ಕನ್ನಡ ಕಲಾವಿದರ ಸಮೇಳನವು ನಾಳೆ ಗಾಂಧೀನಗರದ ಗುಬ್ಬಿ ಥಿಯೇಟರಿನಲ್ಲಿ ನಡೆಸಲು ಏರ್ಪಡಿಸಲಾಗಿದೆ.

ಆರೋಗ್ಯದ ವರದಿ

ಮೈಸೂರು— ಮೈಸೂರು ತಾಲ್ಲೂಕಿನ ಮಲ್ಲೇಗೌಡನ ಹಳ್ಳಿಯಲ್ಲಿ ನಾಲ್ಕು ಜನರಿಗೆ, ಹುಣಸೂರಿನಲ್ಲಿ 45 ಜನರಿಗೆ. ಹುಣಸೂರು ತಾಲ್ಲೂಕಿನ ಕರೀ ಮುದ್ದನಹಳ್ಳಿಯಲ್ಲಿ 6 ಜನರಿಗೆ, ವಿಜಯವಿಂಗಲದಲ್ಲಿ 3 ಜನರಿಗೆ, ವಿಂಡ ಹೋಬಳಿಯ ಚೇರನಹಳ್ಳಿಯಲ್ಲಿ ಮೂವರಿಗೆ, ಕೆ ಆರ್ ನಗರ ತಾಲ್ಲೂಕಿನ ಚಾವೇನಹಳ್ಳಿಯಲ್ಲಿ ಇಬ್ಬರಿಗೆ ಸಿಡುಬು ರೋಗ ತಗುಲಿತ್ತು : ಈ ಭಾಗದಲ್ಲಿ ಒಟ್ಟು 16 ಜನರು ಈ ರೋಗದಿಂದ ಮೃತಪಟ್ಟಿರುತ್ತಾರೆ : ಒಟ್ಟು 13969 ಜನರಿಗೆ ದೇವಿಹಾಕಲಾಯಿತು.

ಕಟ್ಟಡ ಸಾಮಗ್ರಿಗಳ ಪೂರೈಕೆ

ನವದೆಹಲಿ 3— ಕಟ್ಟಡ ಸಾಮಗ್ರಿಗಳ ಬೆಲೆಗಳು ಕೊಂಚಮಟ್ಟಿಗೆ ಏರಿವೆ; ಕೆಲವು ಸಾಮಾನುಗಳ ವಿಷಯದಲ್ಲಂತೂ ಅಭಾವ ತಲೆದೋರಿದೆ, ಎಂದು ನಿನ್ನೆ ತಲೆದೋರಿದೆ ಎಂದು ನಿನ್ನೆ ಲೋಕಸಭೆಯಲ್ಲಿ ತಿಳಿಸಲಾಯಿತು — ಪಂಜಾಬು ಉತ್ತರ ಪ್ರದೇಶ ಮತ್ತು ದೆಹಲಿಗಳಲ್ಲಿ ಇಟ್ಟಿಗೆಗಳ ಬೆಲೆಗಳ ಮೇಲೆ ಹತೋಟಿಯನ್ನು ನಡಲಾಗಿದೆ : ಇದೇ ರೀತಿಯಲ್ಲಿ ಹತೋಟಿಯನ್ನು ವಿಧಿಸಬೇಕೆಂದು ಉಳಿದ ರಾಜ್ಯಗಳಿಗೂ ಸಲಹೆ ಮಾಡಲಾಗಿದೆ, ಎಂದೂ ತಿಳಿಸಲಾಯಿತು.

ಕುಟುಂಬ ಯೋಜನೆ

ನವದೆಹಲಿ 3— ಕುಟುಂಬ ಹೋಜನೆಗಾಗಿಯೇ ಒಂದು ಪ್ರತ್ಯೇಕ ಇಲಾಖೆಯನ್ನು ಸ್ಥಾಪಿಸುವ ವಿಚಾರವಿಲ್ಲ, ಆದರೂ ಕೇಂದ್ರದಲ್ಲಿ ಕೆಲಸಮಾಡುತ್ತಿರುವ ಕುಟುಂಬ ಯೋಜನಾ ಕಾರ್ಯಕ್ರಮದ ಸಂಸ್ಥೆಯನ್ನು ಹೆಚ್ಚು ಬಲಪಡಿಸುವುದಕ್ಕೆ ಸಂಬಂಧಿಸಿದ ಹಲವು ಸಲಹೆಗಳು ಸಂಕಲಿತ ಪರಿಶೀಲನೆಯಲ್ಲಿದೆಯೆಂದು ಲೋಕಸಭೆಯಲ್ಲಿ ತಿಳಿಸಲಾಯಿತು

For Quality Printing

L. N. Press

Sivarampet, Mysore

ಎಲ್ಲ ವಿಧದ ಆಯುರ್ವೇದ ಔಷಧಗಳಿಗೆ

ಅ ಶೋ ಕ ಫಾ ರ್ಮ ಸಿ

ಲ್ಯಾನ್ಸ್‌ಡೌನ್ ಬಜಾರ್ ಮೈಸೂರು

SHAKTI SUDHA

A Superb Tonic

ವುಡ್‌ಲಾಂಡ್ ಮಹಿಮಾನ್ವಿತ 13 ನೆ ವಾರ

ಜಂಗ್ಲಿ (ಹಿಂದಿ) Junglee

ನಟವರ್ಗ— ಶಮ್ಮಿ ಕಾಪೂರ್, ಸೈರಾ ಬಾನು, ಲಲಿತಾ ಪವಾರ್, ಹೆಲೆನ್

ಸಂಗೀತ— ಶಂಕರ್-ಜೈಕಿಶನ್ [ದಿನವಹಿ 3 ಪ್ರದರ್ಶನಗಳು]

Help The 'Gorakshana'

Advertise in Goraksana and help the pious cause

ಗೋರಕ್ಷಣ ಪ್ರಾಣಿದಯಾ ಕಾರ್ಯಗಳು ಹೆಚ್ಚಿಚ್ಚಾಗಿ ನಡೆಯಲಿ

" ಗೋರಕ್ಷಣ " ಪತ್ರಿಕೆಗೆ ಬೆಂಬಲಿಗರಾಗಿರಿ

ಗೋರಕ್ಷಣೆ, ಪ್ರಾಣಿದಯೆ, ಪಶುವೈದ್ಯ, ಶಾಕಾಹಾರ ವಿಚಾರಗಳಿಂದ ಕೂಡಿದ ಏಕೈಕ ಕನ್ನಡ ಪತ್ರಿಕೆ.

ಗೋರಕ್ಷಣ ಪತ್ರಿಕೆಗೆ ಸಹಾಯದ್ರವ್ಯ ಮತ್ತು ಪ್ರಕಟಿಸಲು ಅನುಕೂಲವಾದ ಲೇಖನಗಳನ್ನೂ ವಾರ್ತೆಗಳನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ಆಪೆರಾ— ಜನಪ್ರಿಯ 3 ನೇ ವಾರ

ಸಂಪೂರ್ಣ ರಾಮಾಯಣ

- ಕನ್ನಡ -

[ಪೂರ್ಣ ವರ್ಣರಂಜಿತ ಚಿತ್ರ] [ದಿನವಹಿ 3 ಆಟಗಳು]

— — Mercury Capsule — —

Edited, Printed & Published by the Proprietor, Dharma Prachara Nirata M. S. Krishna Rao at the Sadvadi Press Chamarajapuram, Mysore 4.